ಓ.ಎಸ್. ನಂ. 119/2017
ಡಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 27-07-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ವಾದಿಗಳ ಪರ ಶ್ರೀ ಎ ಎಂ ಕೆ ವಕೀಲರಿಂದ</u>**

**1.** ವಾದಿಗಳು ಈ ದಾವೆಯನ್ನು ಭಾಗ ಸರಿಯಿಲ್ಲವೆಂದು 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಗಳು ವಿಭಾಗ ಆಗಿರುವುದಿಲ್ಲ, ನಾವು ಮತ್ತು ವಾದಿಗಳು ಜಂಟಿ ಸ್ವಾದೀನದಲ್ಲಿರುತ್ತೇವೆ. ದೊಡ್ಡರಂಗಪ್ಪ ನನ್ನ ತಾತನ ಅಣ್ಣ. ಸದರಿ ದೊಡ್ಡರಂಗಪ್ಪನವರಿಗೆ ರಂಗಪ್ಪ ಎಂಬ ಒಬ್ಬನೇ ಮಗ. ತಿಮ್ಮಯ್ಯನ ತಂದೆ ಹೆಸರು ಕಾಮಣ್ಣ. ಸದರಿ ತಿಮ್ಮಯ್ಯನವರ ಹೆಂಡತಿ ಹೆಸರು ದೊಡ್ಡರಾಮಕ್ಕ. ಸದರಿ ತಿಮ್ಮಯ್ಯ ನನ್ನ ತಾತ. ತಿಮ್ಮಯ್ಯನವರಿಗೆ ರಂಗಪ್ಪ ಮತ್ತು ಬೈರಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ಚಿಕ್ಕಮ್ಮ ಮತ್ತು ರಂಗಮ್ಮ ಮಕ್ಕಳು. ಬೈರಪ್ಪನವರ ಹೆಂಡತಿ ಈ ಕೇಸಿನ 1 ನೇ ಪ್ರತಿವಾದಿ, ಸದರಿಯವರಿಗೆ 2 ನೇ ಪ್ರತಿವಾದಿ ಒಬ್ಬಳೇ ಮಗಳು ಎಂದರೆ ಸರಿ. ನನ್ನ ತಾಯಿ ಹೆಸರು ಹನುಮಕ್ಕ ಎಂದರೆ ಸರಿ. ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ರಂಗಪ್ಪ ಮತ್ತು ಕರಿಯಮ್ಮನವರಿಗೆ ರಂಗರಾಜು, ದೊಡ್ಡರಂಗಪ್ಪ ಮತ್ತು ದೇವರಾಜು ಎಂಬ ಮಕ್ಕಳು ಎಂದರೆ ಸರಿ. ಚಿಕ್ಕರಂಗಪ್ಪ ಮತ್ತು ಬಸಮ್ಮ ರವರಿಗೆ ಕಾಮಣ್ಣ, ದೊಡ್ಡಯ್ಯ, ಹನುಮಂತರಾಯಪ್ಪ ಮಕ್ಕಳು ಎಂದರೆ ಸರಿ. ದೊಡ್ಡಯ್ಯ ಮತ್ತು ಅವರ ಹೆಂಡತಿ ಸಿದ್ದರಾಮಕ್ಕನವರಿಗೆ ಪ್ರತಿವಾದಿ 7 ರಿಂದ 11 ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ನನ್ನ ತಾತನ ಸಹೋದರರು ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ B ಷಡ್ಯೂಲ್ ಆಸ್ತಿಗಳು ನಮ್ಮ ಹಾಗೂ ವಾದಿ ಮತ್ತು ಇತರ ಪ್ರತಿವಾದಿಗಳ ಒಟ್ಟು ಕುಟುಂಬ ಆಸ್ತಿಗಳು ಎಂದರೆ ಸರಿ. ದಾವಾ B ಷಡ್ಯೂಲ್ ಆಸ್ತಿಗಳಲ್ಲಿ ವಿಭಾಗ ಮಾಡಿಕೊಳ್ಳಲು ನನ್ನನ್ನದೇನೂ ಅಭ್ಯಂತರ ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**